# ಗ್ರಾಮ ಪಂಚಾಯತ ಕಾರ್ಯಾಲಯ, ಪಟ್ಟಣ

ತಾ.,ಜಿ|| ಕಲಬುರಗಿ


ಶ್ರೀಮತಿ ಜಗದೇವಿ ಶೀರಯ್ಯಾ ಗುತ್ತೇದಾರ
ಅಧ್ಯಕ್ಷರು,
ಗ್ರಾಮ ಪಂಚಾಯತ, ಪಟ್ಟಣ 585311

ಮೊ: 8971124447
ಮು|| ಯಳವಂತಗಿ (ಕೆ)
ತಾ.,ಜಿ|| ಕಲಬುರಗಿ


ದಿನಾಂಕ 19/05/2020

ಹೊರಹೋಗು ಸಂಖ್ಯೆ:

ಗೆ,

ಇವರಿಗೆ:-

ಶ್ರೀ ಬಿ.ಎಸ್.ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ ವಿಧಾನ ಸೌಧ ಬೆಂಗಳೂರು

ವಿಷಯ:- ಗ್ರಾಮ ಪಂಚಾಯತಗಳಿಗೆ ಆಡಳಿತಾಧಿಕಾರಿಗಳು ಅಥವಾ ಆಡಳಿತ ಸಮಿತಿಯ ನೇಮಕದ ಬದಲಿಗೆ ಹಾಲಿ ಇರುವ ಚುನಾಯಿತ ಪ್ರತಿನಿಧಿಗಳನ್ನೇ ಚುನಾವಣೆ ನಡೆಯುವವರೆಗೆ ಮುಂದುವರೆಸುವ ಬಗ್ಗೆ ಒತ್ತಾಯಿಸಿ ಪತ್ರ

ಪ್ರಸ್ತುತ ದೇಶದ್ಯಂತ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್ -19ರ ಪರಿಣಾಮ ಕರ್ನಾಟಕದ ಮೇಲೂ ಆಗಿರುವುದರಿಂದ ರಾಜ್ಯದಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ವಿವಿಧ ರೀತಿಯ ಬದಲಾವಣೆಗಳಾಗಿವೆ. ಇದರ ಪರಿಣಾಮ ಕರ್ನಾಟಕದಲ್ಲಿ ಇದೇ ಮೇ ತಿಂಗಳ ಅಂತ್ಯದೊಳಗೆ ನಡೆಯಬೇಕಿದ್ದ ಗ್ರಾಮ ಪಂಚಾಯತ್ ಚುನಾವಣೆಯು ಮುಂದೂಡಲಾಗಿದೆ ಈ ಕೋವಿಡ್ -19ರ ಸಂಕಷ್ಟದ ಸಮಯದಲ್ಲಿ ಚುನಾವಣೆಯನ್ನು ನಡೆಸುವುದು ಕ್ಲಿಷ್ಟಕರ ಪ್ರಕ್ರಿಯೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಚುನಾವಣಾ ಆಯೋಗ ಹೇಳಿರುವಂತೆ ಸುಮಾರು 6 ತಿಂಗಳುಗಳ ಕಾಲ ಚುನಾವಣೆ ಮುಂದೂಡಬೇಕಾಗಿರುವುದು ಅನಿವಾರ್ಯವಾಗಿದೆ. ಆದರೆ ಆಡಳಿತಾಧಿಕಾರಿಯ ನೇಮಕ ಅಥವಾ ಬೇರ್ಯಾವುದೇ ಉಸ್ತುವಾರಿ ಸಮಿತಿ ನೇಮಿಸುವ ಸರ್ಕಾರದ ಆಲೋಚನೆ ಕಾನೂನಿನಲ್ಲಿ ಅವಕಾಶವಿದ್ದರೂ ಈ ವಿಕೋಪದ ಪರಿಸ್ಥಿತಿ ಸೂಕ್ತವಾದುದಲ್ಲ.

ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸರ್ಕಾರದ ರಥ ಎರಡು ಗಾಲಿಗಳಂತೆ ಸರ್ಕಾರದ ರಥ ಮುನ್ನಡೆಸುವಲ್ಲಿ ಇಬ್ಬರ ಪಾತ್ರವೂ ಬಹಳ ಪ್ರಮುಖವಾದದ್ದು. ಗ್ರಾಮ ಪಂಚಾಯತ್ ಒಂದು ಸ್ಥಳೀಯ ಸ್ವಯಂ ಸರ್ಕಾರ ಹೀಗಾಗಿಯೇ ಇಡೀ ರಾಜ್ಯಾದ್ಯಂತ ಕೋವಿಡ್-19ರ ಪರಿಸ್ಥಿತಿ ಭೀಕರತೆಯು ಆದಾಗ ಮಟ್ಟಹಾಕಲು ಸರ್ಕಾರ ಮಾಡಿದ ಕೆಲಸದೊಂದಿಗೆ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳು, ಸ್ವಯಂಸೇವಾ ಸಂಸ್ಥೆಗಳು, ಸ್ವಯಂಸೇವಕರ ಸಂಯೋಜನೆಯಲ್ಲಿ ಟಾಸ್ಕ್ ಫೋರ್ಸ್ (ಕಾರ್ಯಪಡೆ) ರೂಪಿಸಿ ಇಡೀ ಪಂಚಾಯತ್ ನ ವಿಕೋಪ ನಿರ್ವಹಣೆಯ ಜವಾಬ್ದಾರಿಯ ನೇತೃತ್ವವನ್ನು ಗ್ರಾಮ ಸರ್ಕಾರಕ್ಕೆ ನೀಡಿದ್ದು, ಚುನಾಯಿತ ಪ್ರತಿನಿಧಿಗಳಾದ ನಾವು ಪಂಚಾಯತ್ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅನುಭವ ಪಡೆದು ಗ್ರಾಮ ಪಂಚಾಯತ್ ಅಭಿವೃದ್ಧಿಯಲ್ಲಿ ನಮ್ಮ ಪಾತ್ರ ಜವಾಬ್ದಾರಿಗಳ ಮಹತ್ವವನ್ನು ಆಳವಾಗಿ ಅರ್ಥೈಸಿಕೊಂಡಿದ್ದರಿಂದ ವಿಕೋಪದ ಪರಿಸ್ಥಿತಿಯನ್ನು ಸಹ ನಿಭಾಯಿಸಲು ಸ್ಥಳೀಯ ಸರ್ಕಾರವಾಗಿ ನಮಗೆ ಸಾಧ್ಯವಾಯಿತು ಈ ಸಂದರ್ಭದಲ್ಲಿ, ಗ್ರಾಮೀಣ ಜನರ ಅಗತ್ಯಗಳೇನು, ಇಲ್ಲಿನ ಪರಿಸ್ಥಿತಿ ಹೇಗಿದೆ, ಆಗಬೇಕಾದ ಪ್ರಮುಖ ಕಾರ್ಯಗಳೇನು, ಮುಂದಿರುವ ಸವಾಲುಗಳೇನು ಎಂಬುದನ್ನು ಕೂಲಂಕುಷವಾಗಿ ಗಮನಿಸಿದ್ದೇವೆ

ಒಂದು ರೀತಿಯಲ್ಲಿ ತುರ್ತು ಪರಿಸ್ಥಿತಿಯಂತೆ ಇರುವ ಈ ಸಮಯದಲ್ಲಿ ನಾವು ಸ್ಥಳೀಯ ಸರ್ಕಾರದ ಅವಿಭಾಜ್ಯ ಅಂಗವಾಗಿ, ವಿಕೋಪವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ, ಜನರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಉತ್ತರದಾಯಿಯಾಗಿ ಕಾರ್ಯನಿರ್ವಹಿಸುತ್ತಿದ್ದೇವೆ ಚುನಾಯಿತ ವರ್ಗ ಹಾಗೂ ಅಧಿಕಾರಿ ವರ್ಗ ಒಗ್ಗೂಡಿ ಆಡಳಿತ ನಡೆಸುತ್ತಿರುವುದೇ ಈ ಪರಿಸ್ಥಿತಿಯ ಸಮರ್ಪಕ ನಿರ್ವಹಣೆಗೆ ಪ್ರಮುಖ ಕಾರಣ ಈ ವಿಕೋಪದ ಪರಿಸ್ಥಿತಿ ಇನ್ನೂ ಮುಂದುವರೆಯುತ್ತಿರುವ ಈ ಸಕಾಲಿಕ ಸಮಯದಲ್ಲಿ, ಪಂಚಾಯತ್

19/05/2020

ಅವಕಾಶಕ್ಕೆ ಕೇವಲ ಆಡಳಿತಾಧಿಕಾರಿಯ ಅಥವಾ ಉಸ್ತುವಾರಿ ಸಮಿತಿಯ ನೇಮಕ ಅಸಮಂಜಸವಾದುದು ತಮ್ಮ ಸರ್ಕಾರದ ಈ ಆಲೋಚನೆ, ನಿರ್ಧಾರವನ್ನು ತಕ್ಷಣವೇ ಕೈಬಿಟ್ಟು, ಪ್ರಸ್ತುತ ಇರುವ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುವ ಸ್ಥಳೀಯ ಸರ್ಕಾರವನ್ನೇ ಮಧ್ಯಂತರ ಸ್ಥಳೀಯ ಸ್ವಯಂ ಸರ್ಕಾರವಾಗಿ ಮುಂದುವರಿಸಬೇಕಾಗಿ ಈ ಮೂಲಕ ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನಮ್ಮ ಪಂಚಾಯತ ನ ಸಾಮಾನ್ಯ ಸಭೆಯ ನಿರ್ಣಯವನ್ನು ಮಾಡುತ್ತಿದ್ದೇವೆ ಇದೇ ಪಂಚಾಯತ್‌ನ ಜನರಿಂದ ಜನರಿಂದ ಚುನಾಯಿತರಾದ ನಾವು ಸ್ಥಳೀಯ ಸರ್ಕಾರದ ಭಾಗವಾಗಿ ನಮ್ಮ ಗ್ರಾಮದ ಜನರಿಗೆ, ಗ್ರಾಮದ ಅಭಿವೃದ್ಧಿಗೆ ಬದ್ಧರಾಗಿದ್ದೇವೆ.

ಇಂತಿ

ಗ್ರಾಮ ಪಂಚಾಯತ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಪಟ್ಟಣ ಗ್ರಾಮ ಪಂಚಾಯತ್ ಕಲಬುರಗಿ ತಾಲೂಕು ಕಲಬುರಗಿ ಜಿಲ್ಲೆ

ಯಥಾ ಪ್ರತಿ:-

1. ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರ್ನಾಟಕ ಸರ್ಕಾರ

   ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ

2. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ
3. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರ್ನಾಟಕ ಸರ್ಕಾರ
4. ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕರ್ನಾಟಕ

## ಪಟ್ಟಣ ಗ್ರಾಮ ಪಂಚಾಯತ್ ಕಲಬುರಗಿ ತಾಲೂಕ ಕಲಬುರಗಿ ಜಿಲ್ಲೆ

| | ಹೆಸರು | ಪದನಾಮ | ಸಹಿ |
|---|---|---|---|
| | ಶ್ರೀಮತಿ ಜಗದೇವಿ ಹೀರಯ್ಯ ಗುತ್ತೆದಾರ | ಅಧ್ಯಕ್ಷರು | ಜಗದೇವಿ |
| | ಶ್ರೀ ಅರುಣಕುಮಾರ ರುಕ್ಕಪ್ಪಾ | ಉಪಾಧ್ಯಕ್ಷರು | [signature] |
| | ಶ್ರೀ ಮಹಾಂತೇಶ ಚನ್ನಬಸಪ್ಪ | ಸದಸ್ಯರು | [signature] |
| 4 | ದತ್ತಪ್ಪ ಶರಣಪ್ಪ | ಸದಸ್ಯರು | [signature] |
| 5 | ಅಂಬಿಕಾ ಶರಣಬಸಪ್ಪ | ಸದಸ್ಯರು | ಅಂಬಿಕಾ |
| 6 | ನೀಲಮ್ಮ ಸದಾಶಿವ | ಸದಸ್ಯರು | |
| 7 | ಮಹಾಂತಪ್ಪ ತಿಪ್ಪಣ್ಣಗೌಡ | ಸದಸ್ಯರು | |
| 8 | ಪುತಳಾಬಾಯಿ ವಿಜಯಕುಮಾರ | ಸದಸ್ಯರು | [signature] |
| 9 | ಮುಕ್ತಾಬಾಯಿ ಗುಂಡೇರಾಯ | ಸದಸ್ಯರು | Mgs |
| 10 | ಲಲಿತಾ ಪರಮೇಶ್ವರ | ಸದಸ್ಯರು | ಲಲಿತಾ |
| 11 | ನಾಗಮ್ಮ ಶರಣಪ್ಪ | ಸದಸ್ಯರು | |
| 12 | ಅಪ್ಪಾರಾಯ ರುಕ್ಕಪ್ಪ | ಸದಸ್ಯರು | [signature] |
| 13 | ರಾಚಣ್ಣ ಸಿದ್ರಾಮಪ್ಪ | ಸದಸ್ಯರು | |
| 14 | ಸಿದ್ದಪ್ಪ ಶಿವಲಿಂಗಪ್ಪ | ಸದಸ್ಯರು | SIDDAPPA |
| 15 | ಶ್ರೀಶೈಲ್ ಈರಣ್ಣ | ಸದಸ್ಯರು | |
| 16 | ರೇಖಾ ಲೋಹಿತ | ಸದಸ್ಯರು | |
| 17 | ಪಾರ್ವತಿ ಶಿವಶರಣಪ್ಪ | ಸದಸ್ಯರು | [signature] |
| 18 | ಚಂದ್ರಕಾಂತ ಬಾಬುರಾವ | ಸದಸ್ಯರು | [signature] |